**ವಿಧಾನ ಪರಿಷತ್ ಮಾನ್ಯ ಸದಸ್ಯರುಗಳಾದ ಶ್ರೀ ಡಿ.ಎಸ್. ಅರುಣ್, ಶ್ರೀ ಕೆ.ಪ್ರತಾಪಸಿಂಹ ನಾಯಕ್ ಹಾಗೂ ಶ್ರೀಮತಿ ಭಾರತಿ ಶೆಟ್ಟಿ ಇವರುಗಳು ನಿಯಮ-72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ:** **ಮೂಡಿಗೆರೆ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷನ ಮೇಲೆ ನಡೆದಿರುವ ಹಲ್ಲೆ, ಹಿಂದೂಗಳ ವಿರೋಧಿಯಾಗಿ ಆಡಳಿತ ನಡೆಸುತ್ತಿರುವ ರಾಜ್ಯ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿರುವ ಸಕಲೇಶಪುರದ ಡಿವೈಎಸ್‌ಪಿ ಹಾಗೂ ಇತರೆ ಪೊಲೀಸರ ಕ್ರಮದ ಕುರಿತು.**

**ಉತ್ತರ:** ದಿನಾಂಕ:30.06.2023 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಸಕಲೇಶಪುರ ಹಳೇಬಸ್ ನಿಲ್ದಾಣದ ಬಳಿ ಭಜರಂಗದಳದ ಮುಖಂಡ ಶ್ರೀ ರಘು ಮತ್ತು ಅವರ ಹಿಂಬಾಲಕರು ದಿನಾಂಕ:27.06.2023 ರಂದು ಒಂದು ಎಮ್ಮೆಯನ್ನು ಗುಂಡಿಟ್ಟು ಕೊಂದ ವಿಷಯದ ಸಂಬಂಧ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಪ್ರತಿಭಟನಾ ಕಾಲದಲ್ಲಿ ನಮ್ಮ ಮನೆ ಹತ್ತಿರ ಮೀನು ಮತ್ತು ತರಕಾರಿ ವ್ಯಾಪಾರಕ್ಕೆ ಜಿಹಾದಿಗಳು ಬಂದರೆ ಅವರ ಮೇಲೆ ಗುಂಡು ಹಾರಿಸುತ್ತೇವೆ ಇತ್ಯಾದಿಯಾಗಿ ಪ್ರಚೋದನಾಕಾರಿ ಭಾಷಣ ಮಾಡಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಸಕಲೇಶಪುರ ನಗರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:115/2023 ಕಲಂ 153(ಎ), 295(ಎ), 506 ರೆ/ವಿ 149 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಈ ಪ್ರಕರಣದಲ್ಲಿ ಪ್ರಮುಖ ಆರೋಪಿ ಶ್ರೀ ರಘು @ ರಾಘವೇಂದ್ರ ಮತ್ತು ಅವರ ಸಹಚರರು ತಲೆಮರೆಸಿಕೊಂಡಿದ್ದು ಅವರ ಪತ್ತೆಗಾಗಿ ಕಲೆಹಾಕಿದ್ದ ತಾಂತ್ರಿಕ ಮತ್ತು ಇತರ ಸಾಕ್ಷಿದಾರರ ವಿಚಾರಣೆಯಲ್ಲಿ ಒದಗಿದ ಮಾಹಿತಿ ಮೇರೆಗೆ ಶ್ರೀ ರಘು ರವರು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ವಾಸಿಯಾದ ಬಜರಂಗದಳದ ಕಾರ್ಯಕರ್ತ ಶ್ರೀ ಅವಿನಾಶ್ ಬಿನ್ ಲೇಟ್ ರವಿಗೌಡ ರವರನ್ನು ಭೇಟಿ ಮಾಡಿ, ನಂತರ ಸದರಿ ಶ್ರೀ ಅವಿನಾಶ್ ರವರ ಮೊಬೈಲ್ ಅನ್ನು ಉಪಯೋಗಿಸಿ ಇತರರಿಗೆ ವಾಟ್ಸಾಪ್ ನಲ್ಲಿ ಕರೆ ಮಾಡಿದ ಬಗ್ಗೆ ಮಾಹಿತಿ ದೊರೆತಿರುತ್ತದೆ. ಈ ಸಂಬಂಧವಾಗಿ ದಿನಾಂಕ:01.07.2023 ರಂದು ಬೆಳಗ್ಗೆ ಶ್ರೀ ಅವಿನಾಶ್ ರವರು ಆರೋಪಿ ಶ್ರೀ ರಘು ರವರನ್ನು ಖುದ್ದು ಭೇಟಿ ಮಾಡಿದ ಕುರಿತು ಪ್ರಕರಣದ ತನಿಖಾ ತಂಡವು ಮೂಡಿಗೆರೆಯಲ್ಲಿ ರಾತ್ರಿ 01-00 ಗಂಟೆಯ ಸಮಯದಲ್ಲಿ ಶ್ರೀ ಅವಿನಾಶ್ ರವರನ್ನು ಭೇಟಿ ಮಾಡಿ ವಿಚಾರಣೆ ಮಾಡಿದಾಗ ಯಾವುದೇ ಮಾಹಿತಿ ನೀಡದೇ ಸಹಕರಿಸದಿರುವ ಕಾರಣ, ಸದರಿ ಶ್ರೀ ಅವಿನಾಶ್ ರವರನ್ನು ವಿಚಾರಣೆಗಾಗಿ ಸಕಲೇಶಪುರ ನಗರ ಪೊಲೀಸ್ ಠಾಣೆಗೆ ಕರೆತಂದಿದ್ದು, ಶ್ರೀ ಅವಿನಾಶ್ ರವರು ಠಾಣೆಯಲ್ಲಿಯೂ ಸಹ ಸದರಿ ಶ್ರೀ ರಘು ರವರು ಯಾವ ಕಡೆ ಹೋದರೆಂದು ಹಾಗೂ ಯಾರಿಗೆ ಕರೆ ಮಾಡಿದರೆಂದು ಕೇಳಿದ ಪ್ರಶ್ನೆಗಳಿಗೆ, ಸಮರ್ಪಕವಾದ ಉತ್ತರ ನೀಡದೇ ಸಹಕಾರ ನೀಡಿರುವುದಿಲ್ಲ. ನಂತರದಲ್ಲಿ ಇವರನ್ನು ಕಾನೂನಾತ್ಮಕವಾಗಿ ವಿಚಾರಣೆ ನಡೆಸಿ, ಹೇಳಿಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಕಲಂ 41(ಎ) ಸಿ.ಆರ್.ಪಿ.ಸಿ ರೀತ್ಯಾ ನೋಟಿಸ್ ಜಾರಿ ಮಾಡಿ ಮತ್ತೆ ತನಿಖೆಗೆ ಕರೆದಾಗ ಹಾಜರಾಗುವಂತೆ ತಿಳಿಸಿ ಇವರ ಸ್ನೇಹಿತ ಶ್ರೀ ಮದನ್ ಕುಮಾರ್ ರವರೊಂದಿಗೆ ದಿನಾಂಕ:02.07.2023 ರಂದು ಸಂಜೆ 06.00 ಗಂಟೆಯ ಸಮಯದಲ್ಲಿ ಕಳುಹಿಸಿಕೊಡಲಾಯಿತು.

ನಂತರ ಅವಿನಾಶ್ ರವರು ಪೊಲೀಸರು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆಂದು ಆಪಾದಿಸಿ ಅವರ ವಿರುದ್ಧ ಕಾನೂನು ಶಿಸ್ತು ಕ್ರಮ ಕೈಗೊಳ್ಳಿ ಎಂದು ದಿನಾಂಕ:05.07.2023 ರಂದು ಸಕಲೇಶಪುರ ಪೊಲೀಸ್ ಠಾಣೆಯ ಠಾಣಾಧಿಕಾರಿಯವರಿಗೆ ದೂರು ನೀಡಿದ್ದು, ಸದರಿಯವರು ದೂರನ್ನು ಈ ಕಛೇರಿಗೆ ಕಳುಹಿಸಿದ ಕಾರಣ ದಿನಾಂಕ:06.07.2023ರಂದು ಪ್ರಾಥಮಿಕ ವಿಚಾರಣೆಗಾಗಿ ಅಪರ ಪೊಲೀಸ್ ಅಧೀಕ್ಷಕರಿಗೆ ವಹಿಸಲಾಗಿರುತ್ತದೆ. ಸದರಿ ದೂರು ಅರ್ಜಿ ವಿಚಾರಣೆಯಲ್ಲಿರುತ್ತದೆ.

---

ಹೆಚ್‌ಡಿ 336 ಎಸ್‌ಎಸ್‌ಟಿ 2023

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು